KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಗಣೇಶಪ್ಪ | **ಪಿ.ಡಬ್ಲ್ಯೂ** | 10 |
| **ತಂದೆಯ ಹೆಸರು** | ಸಿದ್ದೇಗೌಡ | **ಸಿ.ಡಬ್ಲ್ಯೂ** | 07 |
| **ವಯಸ್ಸು** | 61 ವರ್ಷ | | |
| **ಉದ್ಯೋಗ** | ವ್ಯವಸಾಯ | | |
| **ವಾಸಸ್ಥಳ** | ತಾವರೆಹಳ್ಳಿ ಅರಸೀಕೆರೆ ತಾಃ | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 08-02-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಚಾಸಾ.6 ನನ್ನ ಅಕ್ಕ. ಮೃತ ತಮ್ಮಯ್ಯರವರು ನನ್ನ ಬಾವ. ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಕಾಣುತ್ತಿರುವ ಆರೋಪಿಯು ಮೃತರ ಮಗ. ಚಾಸಾ.1 ರವರು ಮೃತರ ಮಗಳು.**

2. **2021 ನೇ ಇಸವಿಯಲ್ಲಿ ಒಂದು ದಿನ ಆರೋಪಿ ಹಾಗೂ ಮೃತ ತಮ್ಮಯ್ಯರವರ ನಡುವೆ ಟ್ರ್ಯಾಕ್ಟರ್ ವಿಚಾರಕ್ಕೆ ಜಗಳವಾಗಿದೆ ಬನ್ನಿ ಅಂತ ಯಾರೋ ನನಗೆ ಫೋನ್ ಮಾಡಿದ್ದರಿಂದ ನಾನು ಬಂದು ನೋಡಿದಾಗ ತಮ್ಮಯ್ಯರವರನ್ನು ಕಾರಿಗೆ ಹಾಕುತ್ತಿದ್ದರು. ನಂತರ ಮೃತರ ಶವವನ್ನು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿರುತ್ತಾರೆ. ಅಲ್ಲಿ ನಿಪಿ.5 ಮತ್ತು ಪಿ.6 ರ ಫೋಟೋಗಳನ್ನು ತೆಗೆದಿರುತ್ತಾರೆ. ಮೃತರು ಯಾವ ಕಾರಣಕ್ಕೆ**

ಮೃತಪಟ್ಟಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 11-01-2021 ರಂದು ಸಂಜೆ 4.15 ಗಂಟೆಗೆ ನಮ್ಮ ಸಂಬಂಧಿಯೊಬ್ಬರು ನನಗೆ ಫೋನ್ ಮಾಡಿ, ನನ್ನ ಬಾವ ತಮ್ಮಯ್ಯರವರಿಗೆ ಅವರ ಮಗ ಸತೀಶನು ಶಾಲೆಯ ಹಿಂಭಾಗ ಕಲ್ಲಿನಿಂದ ತಲೆಗೆ ಜಜ್ಜಿ ಕೊಲೆ ಮಾಡಿತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಬಂದು ನೋಡಲಾಗಿ, ನನ್ನ ಬಾವನ ಶವ ರಕ್ತದ ಮಡುವಿನಲ್ಲಿ ಮಕಾಡೆಯಾಗಿ ಬಿದ್ದಿದ್ದು ಅವರ ತಲೆಯ ಬಲಭಾಗ ಜಜ್ಜಿ ಹೋಗಿರುತ್ತದೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿದ್ದ ಚಾಸಾ.1 ರವರನ್ನು ವಿಚಾರಿಸಿದಾಗ, ಈ ದಿನ ಮಧ್ಯಾಹ್ನ 3 ಗಂಟೆಗೆ ತನ್ನ ತಂದೆ ಮೃತ ತಮ್ಮಯ್ಯರವರು ಜಮೀನಿಗೆ ಹೋಗಿ ವಾಪಸ್ ಮನೆಗೆ ಬಂದು ಮನೆಯಲ್ಲಿದ್ದ ಆರೋಪಿಗೆ ಟ್ರ್ಯಾಕ್ಟರ್ ನ ಸಾಲವನ್ನು ಕಂತು ಕಟ್ಟದಿರುವ ಬಗ್ಗೆ ಕೇಳಿದ್ದು, ಬ್ಯಾಂಕಿನ ಸಿಬ್ಬಂದಿಯವರು ತನ್ನ ಬಳಿ ಬಂದು ಟ್ರ್ಯಾಕ್ಟರ್ ನ ಸಾಲದ ಹಣ ಕಟ್ಟಿಲ್ಲವೆಂದು ಕೇಳಿ ನನ್ನ ಮರ್ಯಾದೆ ತೆಗೆದು ಹೋಗಿರುತ್ತಾರೆ, ನೀನು ದುಡಿದು ಟ್ರ್ಯಾಕ್ಟರ್ ನ ಕಂತನ್ನು ಕಟ್ಟಲು ಆಗುವುದಿಲ್ಲವೇ, ಬಿಟ್ಟಿ ಓಡಾಡಿಕೊಂಡು ದಂಡಪಿಂಡನಂತೆ ಇರುತ್ತೀಯಾ ಎಂದು ಬೈದಿದ್ದು, ಆಗ ಒಬ್ಬರಿಗೊಬ್ಬರು

ಮಾತಿಗೆ ಮಾತು ಬೆಳೆದು ಬೈದಾಡಿಕೊಂಡು ಜಗಳ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವು ಜಗಳ ಬಿಡಿಸಿ ಸಮಾಧಾನ ಮಾಡಿದೆವು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 3.30 ಗಂಟೆಗೆ ನನ್ನ ತಂದೆ ತೋಟಕ್ಕೆ ಹೋಗುವುದಾಗಿ ಮನೆಯಿಂದ ಹೊರಟು ಮನೆಯ ಬಳಿ ಹೋಗುತ್ತಿದ್ದಾಗ ಮತ್ತೆ ಆರೋಪಿಯು ನನ್ನ ತಂದೆಯೊಂದಿಗೆ ಗಲಾಟೆ ಮಾಡಿ ಇವತ್ತು ನಿನ್ನನ್ನು ಕೊಲೆ ಮಾಡಿ ಕಂತು ಕಟ್ಟುತ್ತೇನೆ ಎಂದು ಹೇಳುತ್ತಾ ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಹೊಡೆಯಲು ಹೋದಾಗ ನನ್ನ ತಂದೆಯವರು ಅಲ್ಲಿಂದ ಓಡಿ ಹೋದರು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಕೈಯಲ್ಲಿ ಕಲ್ಲನ್ನು ಹಿಡಿದುಕೊಂಡು ನನ್ನ ತಂದೆಯ ಹಿಂದೆ ಹೋಗಿದ್ದು ನನ್ನ ತಂದೆಯು ಅವನಿಂದ ತಪ್ಪಿಸಿಕೊಳ್ಳಲು ನಮ್ಮೂರಿನ ಶಾಲೆ ಕಡೆಗೆ ಓಡಿ ಹೋಗಿದ್ದು, ಅವರ ಹಿಂದೆ ಆರೋಪಿಯು ಕಲ್ಲನ್ನು ಹಿಡಿದುಕೊಂಡು ಓಡಿ ಹೋಗಿ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಕಲ್ಲಿನಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ವಿವರವಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.23 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

4. 2021 ನೇ ಇಸವಿಯಲ್ಲಿ ಒಂದು ದಿನ ಆರೋಪಿ ಹಾಗೂ ಮೃತ ತಮ್ಮಯ್ಯರವರ ನಡುವೆ ಟ್ರಾಕ್ಟರ್ ವಿಚಾರಕ್ಕೆ ಜಗಳವಾಗಿದೆ ಬನ್ನಿ ಅಂತ ಯಾರೋ ನನಗೆ ಫೋನ್ ಮಾಡಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮೃತ ತಮ್ಮಯ್ಯರವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದು ಬಿಟ್ಟರೆ ಅವರು ಹೇಗೆ ಮತ್ತು ಯಾವ ಕಾರಣಕ್ಕೆ ಮೃತ ಪಟ್ಟರು ಅಂತ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app "**eCourts Services**" from Android or iOS